# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 713 |
| ಸದಸ್ಯರ ಹೆಸರು: | : | ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು: | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ: | : | 13.12.2024 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ 2019 ರಿಂದ 2023 ರವರೆಗೆ ಅಂಗನವಾಡಿಗಳ ಸ್ಥಿತಿ-ಗತಿಗಳು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಆಗಿರುವ ಬದಲಾವಣೆಗಳ ಕುರಿತು ಮಾಹಿತಿ ನೀಡುವುದು: | • ರಾಜ್ಯದಲ್ಲಿ 2019 ರಿಂದ 2023 ರವರೆಗೆ ಕಾರ್ಯನಿರತ ಅಂಗನವಾಡಿಗಳ ಸಂಖ್ಯೆಯು 66361 ರಿಂದ 69899 ಕ್ಕೆ ಏರಿಕೆಯಾಗಿರುತ್ತದೆ.<br>• ಅಂಗನವಾಡಿ ಕೇಂದ್ರಗಳಲ್ಲಿ RO, LED, Rain Water Harvesting, ಪೋಷಣ್ ವಾಟಿಕಾ, ಇತ್ಯಾದಿ ಸೌಲಭ್ಯಗಳನ್ನು ಒದಗಿಸಿ ಸಕ್ಷಮ್ ಅಂಗನವಾಡಿಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.<br>• ರಾಜ್ಯದಲ್ಲಿ 2019 ರಿಂದ 2023 ನೇ ಸಾಲಿನಲ್ಲಿನ ಸ್ವಂತ ಅಂಗನವಾಡಿ ಕಟ್ಟಡಗಳ ಸಂಖ್ಯೆಯು 44,000 ರಿಂದ 47,232 ಕ್ಕೆ ಏರಿಕೆಯಾಗಿರುತ್ತದೆ.<br>• ರಾಜ್ಯದಲ್ಲಿ 2019 ರಿಂದ ಇಲ್ಲಿಯವರೆಗೆ ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ ಮತ್ತು ನೀರಿನ ಸೌಲಭ್ಯವು ಕ್ರಮವಾಗಿ 58729 ರಿಂದ 66546 ಹಾಗೂ 59509 ರಿಂದ 65970 ಕ್ಕೆ ಏರಿಕೆಯಾಗಿರುತ್ತದೆ.<br>• ಅಪೌಷ್ಠಿಕ ಮಕ್ಕಳ ಸಂಖ್ಯೆಯು ಗಣನೀಯವಾಗಿ ಇಳಿಕೆಯಾಗಿರುತ್ತದೆ. |
| ಆ. | ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಂಗನವಾಡಿ ಕೇಂದ್ರಗಳ ಮೂಲಕ ಬಡ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ (Overall Development). ಆರೋಗ್ಯ ಸೌಲಭ್ಯಗಳು, ಶಿಕ್ಷಣ ಮತ್ತು ಪೌಷ್ಟಿಕಾಂಶದ ಸ್ಥಿತಿಯನ್ನು ಸುಧಾರಿಸುವ ಗುರಿ ಮತ್ತು ಉದ್ದೇಶಗಳನ್ನು ಸರ್ಕಾರ ಸಾಧಿಸಿದೆಯೇ:<br><br>(ಮಾಹಿತಿಯನ್ನು ಜಿಲ್ಲಾವಾರು ನೀಡುವುದು) | ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಂಗನವಾಡಿ ಕೇಂದ್ರಗಳ ಮೂಲಕ ಬಡ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಆರೋಗ್ಯ ಸೌಲಭ್ಯಗಳು ಮತ್ತು ಪೌಷ್ಠಿಕಾಂಶದ ಸ್ಥಿತಿಯನ್ನು ಸುಧಾರಿಸಲು ಇಲಾಖೆಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>**<u>ಪೂರಕ ಪೌಷ್ಠಿಕ ಆಹಾರ :</u>**<br><br>ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾದ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 300 ದಿನಗಳ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.<br><br>• ಎಲ್ಲಾ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಪ್ರತಿದಿನ ರೂ.8.00 ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ. |

- ತೀವ್ರ ಅಪೌಷ್ಟಿಕ ಮಕ್ಕಳಿಗೆ ಪ್ರತಿ ದಿನ ರೂ.12.00 ಮೌಲ್ಯದ ಪೂರಕ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ.
- ಅಂಗನವಾಡಿಗೆ ಹಾಜರಾಗುವ 3 ವರ್ಷದಿಂದ 6 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ.
- ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ 6 ತಿಂಗಳಿಂದ 6 ವರ್ಷದ ಎಲ್ಲಾ ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 5 ದಿನ 150 ಮಿ.ಲಿ ಹಾಲನ್ನು (15ಗ್ರಾಂ ಕೆನೆಭರಿತ ಹಾಲಿನಪುಡಿ, 5 ಗ್ರಾಂ ಸಕ್ಕರೆ) ನೀಡಲಾಗುತ್ತಿದೆ.
- 6 ತಿಂಗಳಿಂದ 3 ವರ್ಷದ ತೀವ್ರ / ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ. ಹಾಲಿನ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ.
- 3 ವರ್ಷದಿಂದ 6 ವರ್ಷದ ತೀವ್ರ / ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ. ಹಾಲಿನ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ.
- ತೀವ್ರ ಅಪೌಷ್ಟಿಕ ಮಕ್ಕಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪೌಷ್ಟಿಕ ಪುನರ್ವಸತಿ ಕೇಂದ್ರ (NRC) ಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.
- ಆರೋಗ್ಯ ಮತ್ತು ಪೌಷ್ಟಿಕ ಶಿಬಿರಗಳನ್ನು ಏರ್ಪಡಿಸಿ ಅಧಿಕ ಪೌಷ್ಟಿಕತೆಯುಳ್ಳ ಆಹಾರಗಳನ್ನು ತಯಾರಿಸುವ ಕುರಿತು ಮತ್ತು ಮಕ್ಕಳಿಗೆ ಪೌಷ್ಟಿಕತೆಯುಳ್ಳ ಆಹಾರವನ್ನು ನೀಡಲು ತಿಳುವಳಿಕೆ ನೀಡಲಾಗುತ್ತಿದೆ.

**2. ಚುಚ್ಚುಮದ್ದು ಕಾರ್ಯಕ್ರಮ:**

6 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಿಗದಿತ ಚುಚ್ಚುಮದ್ದನ್ನು ನೀಡಲಾಗುತ್ತಿದೆ.

**3. ಆರೋಗ್ಯ ತಪಾಸಣೆ:**

ಅಂಗನವಾಡಿ ಕೇಂದ್ರದಲ್ಲಿ ದಾಖಲಾಗಿರುವ ಎಲ್ಲಾ ಮಕ್ಕಳ ಆರೋಗ್ಯ ತಪಾಸಣೆಯನ್ನು ನಿಯಮಿತವಾಗಿ 3 ತಿಂಗಳಿಗೊಮ್ಮೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಡೆಸಲಾಗುತ್ತಿದೆ.

**4.ಮಾಹಿತಿ ಸೇವೆ:**

ಅಂಗನವಾಡಿ ಕೇಂದ್ರಗಳಿಗೆ ವೈದ್ಯಾಧಿಕಾರಿಗಳು ಭೇಟಿ ನೀಡಿ ಮಕ್ಕಳ ಆರೋಗ್ಯ ತಪಾಸಣೆ ಮಾಡಿದಾಗ

ಹೆಚ್ಚಿನ ತಪಾಸಣೆಗೆ ಅಥವಾ ಚಿಕಿತ್ಸೆಗೆ ತಾಲ್ಲೂಕು ಆರೋಗ್ಯ ಕೇಂದ್ರ / ಜಿಲ್ಲಾ ಆರೋಗ್ಯ ಕೇಂದ್ರಕ್ಕೆ / ಪೌಷ್ಟಿಕ ಪುನರ್ವಸತಿ

| | | |
|---|---|---|
| | | ಕೇಂದ್ರಗಳಿಗೆ ಕಳುಹಿಸಲು ಸೂಚಿಸುತ್ತಾರೆ. ವೈದ್ಯರು ಸೂಚಿಸಿದಂತೆ ಅಂಗನವಾಡಿ ಕಾರ್ಯಕರ್ತೆಯರು ಹೆಚ್ಚಿನ ಚಿಕಿತ್ಸೆ, ತಪಾಸಣೆಗೆ ಮಕ್ಕಳನ್ನು ಕಳುಹಿಸಿಕೊಡುತ್ತಾರೆ.<br>ಜಿಲ್ಲಾವಾರು ಅಪೌಷ್ಠಿಕ ಮಕ್ಕಳ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ. | ರಾಜ್ಯದಲ್ಲಿ ಕೆಲವೊಂದು ಅಂಗನವಾಡಿ ಕೇಂದ್ರಗಳು ಇಲ್ಲಿಯವರೆವಿಗೂ ಬಾಡಿಗೆ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇಲ್ಲಿ ಓದುತ್ತಿರುವ ಮಕ್ಕಳಿಗೆ ಸರಿಯಾದ ಮೂಲಭೂತ ಸೌಕರ್ಯಗಳಿಲ್ಲದಿರುವುದು (ಮೇಲ್ಛಾವಣಿ ಕುಸಿದ ಬೀಳುವುದು, ಶೌಚಾಲಯಗಳು ಇಲ್ಲದೇ ಇರುವುದು ಇತ್ಯಾದಿ) ಸರ್ಕಾರ ಗಮನಕ್ಕೆ ಬಂದಿದೆಯೇ? | ಬಂದಿದೆ. |
| ಈ. | ಬಂದಿದ್ದಲ್ಲಿ, ಈ ಕುರಿತು ಇಲಾಖೆ ಕೈಗೊಂಡಿರುವ ಕ್ರಮವೇನು; ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುತ್ತಿರುವ ಪೌಷ್ಠಿಕಾಂಶಗಳ ವಿತರಣೆಯನ್ನು ಯಾವ ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ; ಈ ಗುತ್ತಿಗೆಯನ್ನು ಕೇಂದ್ರಿಕರಿಸಲಾಗಿದೆಯೇ ಅಥವಾ ಜಿಲ್ಲಾ ಮಟ್ಟದ ಕಛೇರಿಗಳಿಗೆ ಗುತ್ತಿಗೆದಾರರನ್ನು ನೇಮಕ ಮಾಡುವ ಜವಾಬ್ದಾರಿಯನ್ನು ನೀಡಲಾಗಿದೆಯೇ; | ರಾಜ್ಯದ 69919 ಅಂಗನವಾಡಿಗಳ ಪೈಕಿ 47232 ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡಗಳನ್ನು ಹೊಂದಿದ್ದು, 12960 ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ನಿವೇಶನದ ಲಭ್ಯತೆ ಆಧಾರದ ಮೇಲೆ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಕ್ರಮ ವಹಿಸಲಾಗುತ್ತಿದೆ.<br><br>ಎಲ್ಲಾ ಮೂಲಭೂತ ಸೌಕರ್ಯಗಳಿರುವ ಬಾಡಿಗೆ ಕಟ್ಟಡಗಳನ್ನು ಪಡೆಯುವಂತೆ ಎಲ್ಲಾ ಜಿಲ್ಲೆಗಳಿಗೆ ಈಗಾಗಲೇ ಸೂಚನೆ ನೀಡಲಾಗಿರುತ್ತದೆ.<br><br>ದುರಸ್ಥಿಯಲ್ಲಿರುವ ಅಂಗನವಾಡಿ ಕಟ್ಟಡಗಳನ್ನು ದುರಸ್ಥಿಗೊಳಿಸಲು ಅಂಗನವಾಡಿ ಕಟ್ಟಡಗಳ ನಿರ್ವಹಣೆ ಯೋಜನೆಯಡಿ ಕ್ರಮ ವಹಿಸಲಾಗಿದ್ದು, ಒಂದು ವೇಳೆ ಸಂಪೂರ್ಣ ಕಟ್ಟಡ ಶಿಥಿಲಾವಸ್ಥೆಯಾಗಿದ್ದಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಪ್ರಸ್ತಾಪಿಸಿ, ಸದರಿ ಅಂಗನವಾಡಿ ಕೇಂದ್ರಗಳನ್ನು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.<br><br>ಎಲ್ಲಾ ಮೂಲಭೂತ ಸೌಕರ್ಯವುಳ್ಳ ಹತ್ತಿರದ ಶಾಲಾ ಕಟ್ಟಡಕ್ಕೆ ಅಂಗನವಾಡಿ ಕೇಂದ್ರವನ್ನು ಸ್ಥಳಾಂತರಿಸಲು ಕ್ರಮ ವಹಿಸಲಾಗಿದೆ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 07-10-2004 ರ ಆದೇಶದಲ್ಲಿ ಸಮಗ್ರ ಶಿಶು ಅಭಿವೃದ್ಧಿ |

| | | |
|---|---|---|
| | | ಯೋಜನೆಯಡಿ ಅಂಗನವಾಡಿಗಳಲ್ಲಿನ ಆಹಾರ ಸರಬರಾಜಿಗೆ ಗುತ್ತಿಗೆದಾರರನ್ನು ಬಳಸಬಾರದೆಂದು ಮತ್ತು ಆಹಾರ ಸಾಮಗ್ರಿಗಳನ್ನು ಖರೀದಿಸಲು, ಪೌಷ್ಟಿಕ ಆಹಾರ ಸಿದ್ಧಪಡಿಸಲು ಗ್ರಾಮ ಸಮುದಾಯ, ಸ್ವಸಹಾಯ ಗುಂಪುಗಳು ಮತ್ತು ಮಹಿಳಾ ಮಂಡಳಿಗಳನ್ನು ಬಳಸಿಕೊಂಡು ಐ.ಸಿ.ಡಿ.ಎಸ್. ಅನುದಾನವನ್ನು ಉಪಯೋಗಿಸಿಕೊಳ್ಳಲು ಆದೇಶ ನೀಡಿರುತ್ತದೆ.<br><br>ಸದರಿ ಆದೇಶದಂತೆ ರಾಜ್ಯದಲ್ಲಿ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಕೇಂದ್ರ (ಎಂ.ಎಸ್.ಪಿ.ಸಿ.) ಗಳನ್ನು ಸ್ಥಾಪಿಸಿ ಇವುಗಳಿಂದ ಅಂಗನವಾಡಿ ಕೇಂದ್ರಗಳಲ್ಲಿನ ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರವನ್ನು ಪೂರೈಸಲಾಗುತ್ತಿದೆ. |
| ಉ. | ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳಲ್ಲಿ ಆಂಗ್ಲ ಮಾಧ್ಯಮದ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆಯೇ; ಹೌದಾದಲ್ಲಿ, ಎಷ್ಟು ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು ಮತ್ತು ಈ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸಲಾಗಿದೆಯೇ;<br>(ಮಾಹಿತಿ ನೀಡುವುದು) | ಬೆಂಗಳೂರು ನಗರ ಜಿಲ್ಲೆಯ 250 ಅಂಗನವಾಡಿ ಕೇಂದ್ರಗಳಲ್ಲಿ 4-5 ವರ್ಷದ ಮಕ್ಕಳಿಗೆ ಪೂರ್ವ ಪ್ರಾಥಮಿಕ (LKG/UKG) ತರಗತಿಗಳನ್ನು ಪ್ರಾಯೋಗಿಕವಾಗಿ ಆರಂಭಿಸಲು ತಾತ್ವಿಕ ಅನುಮೋದನೆ ನೀಡಲಾಗಿದ್ದು, ಅದರಂತೆ, ಬೆಂಗಳೂರು ನಗರ ಜಿಲ್ಲೆಯ 250 ಅಂಗನವಾಡಿ ಕೇಂದ್ರಗಳಲ್ಲಿ LKG/UKG ತರಗತಿಗಳನ್ನು ಪ್ರಾರಂಭಿಸಲಾಗಿರುತ್ತದೆ.<br><br>ಕಲ್ಯಾಣ ಕರ್ನಾಟಕದ 844 ಅಂಗನವಾಡಿ ಕೇಂದ್ರಗಳಲ್ಲಿ ಹಾಗೂ ಉಳಿದ ಜಿಲ್ಲೆಗಳ ಶಾಲಾ ಕಟ್ಟಡ ಹಾಗೂ ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿರುವ 8933 ಆಯ್ದ ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವ ಪ್ರಾಥಮಿಕ (LKG/UKG) ತರಗತಿಗಳನ್ನು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಹಂತ-ಹಂತವಾಗಿ ರಾಜ್ಯದ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ LKG/UKG ತರಗತಿಗಳನ್ನು ಪ್ರಾರಂಭಿಸಿ, ಆಂಗ್ಲ ಮತ್ತು ಕನ್ನಡ ಬೋಧನೆ ಮಾಡಲು ಉದ್ದೇಶಿಸಲಾಗಿದೆ.<br><br>ದ್ವಿತೀಯ ಪಿ.ಯು.ಸಿ. ಮತ್ತು ಪದವಿ/ ಸ್ನಾತಕೋತ್ತರ ಪದವಿ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರಿಗೆ ಅಗತ್ಯ ತರಬೇತಿ ನೀಡಿ ಬೋಧನೆ ಮಾಡಲು ಗುರುತಿಸಲಾಗಿರುತ್ತದೆ. |

**ಸಂಖ್ಯೆ:** ಮಮಇ 305 ಐಸಿಡಿ 2024

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

| ಕರ್ನಾಟಕದ ಜಿಲ್ಲೆಗಳಿರುವ ಅಪೌಷ್ಟಿಕ ಮಕ್ಕಳ ಮಾಹಿತಿ (ನವೆಂಬರ್ 2024 ಅಂತ್ಯಕ್ಕೆ) | | | | | | | |
|---|---|---|---|---|---|---|---|
| **District** | **Total Active Children Registered in the AWC for the Month** | **Total Active Children measured (Height & Weight) for the Month** | **Measurement efficiency (%)** | **SAM (N)** | **SAM (%)** | **MAM (N)** | **MAM (%)** |
| Bagalkot | 138603 | 135332 | 97.64 | 459 | 0.34 | 2675 | 1.98 |
| Bangalore Rural | 47041 | 46561 | 98.98 | 55 | 0.12 | 348 | 0.75 |
| Belagavi | 355530 | 354208 | 99.63 | 761 | 0.21 | 10102 | 2.85 |
| Bellary | 106976 | 104881 | 98.04 | 637 | 0.61 | 3837 | 3.66 |
| Bengaluru Urban | 174977 | 168152 | 96.1 | 188 | 0.11 | 2730 | 1.62 |
| Bidar | 116798 | 114782 | 98.27 | 734 | 0.64 | 5695 | 4.96 |
| Chamarajanagar | 41768 | 40144 | 96.11 | 267 | 0.67 | 1743 | 4.34 |
| Chikballapur | 65031 | 64211 | 98.74 | 201 | 0.31 | 2601 | 4.05 |
| Chikkamagaluru | 47000 | 46931 | 99.85 | 49 | 0.1 | 1233 | 2.63 |
| Chitradurga | 97682 | 96475 | 98.76 | 364 | 0.38 | 4986 | 5.17 |
| Dakshina Kannada | 98741 | 96939 | 98.18 | 133 | 0.14 | 746 | 0.77 |
| Davanagere | 96475 | 95344 | 98.83 | 174 | 0.18 | 2930 | 3.07 |
| Dharwad | 103489 | 102601 | 99.14 | 220 | 0.21 | 1958 | 1.91 |
| Gadag | 72262 | 71123 | 98.42 | 129 | 0.18 | 812 | 1.14 |
| Hassan | 64391 | 64266 | 99.81 | 596 | 0.93 | 2056 | 3.2 |
| Haveri | 110222 | 110099 | 99.89 | 113 | 0.1 | 419 | 0.38 |
| Kalaburagi | 209236 | 205107 | 98.03 | 2050 | 1 | 9726 | 4.74 |
| Kodagu | 21540 | 21131 | 98.1 | 154 | 0.73 | 521 | 2.47 |
| Kolar | 86112 | 85196 | 98.94 | 62 | 0.07 | 1017 | 1.19 |
| Koppal | 119246 | 118642 | 99.49 | 269 | 0.23 | 3305 | 2.79 |
| Mandya | 76943 | 76642 | 99.61 | 234 | 0.31 | 1485 | 1.94 |
| Mysuru | 134633 | 133087 | 98.85 | 188 | 0.14 | 2240 | 1.68 |
| Raichur | 163574 | 160514 | 98.13 | 1798 | 1.12 | 11102 | 6.92 |
| Ramanagara | 43933 | 43351 | 98.68 | 208 | 0.48 | 864 | 1.99 |
| Shivamogga | 86850 | 86672 | 99.8 | 80 | 0.09 | 1241 | 1.43 |
| Tumakuru | 130679 | 130269 | 99.69 | 241 | 0.19 | 1829 | 1.4 |
| Udupi | 40046 | 39734 | 99.22 | 182 | 0.46 | 785 | 1.98 |
| Uttara Kannada | 65635 | 64811 | 98.74 | 99 | 0.15 | 598 | 0.92 |
| Vijayanagara | 97741 | 96175 | 98.4 | 1018 | 1.06 | 4848 | 5.04 |
| Vijayapura | 181970 | 178436 | 98.06 | 361 | 0.2 | 4687 | 2.63 |
| Yadgir | 105637 | 104755 | 99.17 | 503 | 0.48 | 5608 | 5.35 |
| **Total** | **3300761** | **3256571** | **98.66** | **12527** | **0.38** | **94727** | **2.91** |